ಸಾಕ್ಷಿದಾರರನ್ನು ಕರೆಸಿ ಪ್ರಮಾಣಿಕರಿಸಲಾಯಿತು. ದಿನಾಂಕ : 07.08.2025.

**ಪಾಟೀ ಸವಾಲುಃ ಆರೋಪಿ ಪರಃ ವಕೀಲರಿಂದಃ**

ನಾನು 2 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ಖಾಯಂ ತಾರೀಖವಾಗಿ ಬ್ಯಾಡಗಿಯಲ್ಲಿ ವಾಸವಾಗಿದ್ದೇನೆ. ನನಗೆ ಹಾವೇರಿಯ ಹಸನಸಾಬ್ ಚಮನಸಾಬ್ ಗಣಜೂರ ಇವರ ಪರಿಚಯ ಇರುತ್ತದೆ. ಸದರಿ ಹಸನಸಾಬ್ ಇವರು ನನ್ನ ಆತ್ಮೀಯ ಸೇಹಿತರು ಅಂದರೆ ಸರಿ. ನಾನು ಆದಾಯ ತೆರಿಗೆ ಭರಣ ಮಾಡುತ್ತೇನೆ. ನಾನು ಬಿ ಎಸ ಹಲಗೇರಿ ಟ್ರೇಡರ್ಸ ಅಂಗಡಿಯ ನಾಮೆಯ ಮೇಲೆ ವ್ಯಾಪಾರ ಮಾಡುತ್ತೇನೆ. ನಾನು 2022 ರಿಂದ 2023 ಕೊನೆಯವರೆಗೆ ಆದಾಯ ತೆರಿಗೆ ಭರಣ ಮಾಡಿರುತ್ತೇನೆ. ನನಗೆ ಅಗಡಿ ಗ್ರಾಮದಲ್ಲಿ ಜಮೀನು ಇದೆ. ನನ್ನ ಹೆಂಡತಿಯ ಹೆಸರಿಗೆ 3 ಎಕರೆ 27 ಗುಂಟೆ, ಹಾಗೂ ನನ್ನ ಹೆಸರಿಗೆ 4 ಎಕರೆ 16 ಗುಂಟೆ ಜಮೀನು ಇದೆ. ನಾವು ಸ್ವಂತ ಕಮತ ಮಾಡಿಸುತ್ತೇವೆ. 2021 ರಿಂದ 2023 ರವರೆಗೆ ಜಮೀನಿನಲ್ಲಿಯ ಉತ್ಪನ್ನ ಮಾರಾಟ ಮಾಡಿದ ಬಿಲ್ಲುಗಳು ನನ್ನ ಹತ್ತಿರ ಇವೆ. ನಾನು ಆದಾಯ ತೆರಿಗೆ ಭರಣ ಮಾಡಿದ ದಾಖಲೆ ಮತ್ತು ಜಮೀನಿನ ಬಿಲ್ಲು ಉತ್ಪನ್ನ ಮಾರಾಟ ಮಾಡಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲಾ. ನಾನು ಬಿ ಎಸ ಹಲಗೇರಿ ಟ್ರೇಡರ್ಸ ಅಂಗಡಿಯಲ್ಲಿ ಖಾಲಿ ಚೀಲದ ವ್ಯಾಪಾರ ಮತ್ತು ಮೆಣಸಿನಕಾಯಿ ವ್ಯಾಪಾರ ಮಾಡುತ್ತೇವೆ. ಸದರಿ ಅಂಗಡಿ ನನ್ನ ತಂದೆಯ ಹೆಸರಿಗೆ ಮತ್ತು ನನ್ನ ಮೂರು ಜನ ಅಣ್ಣತಮ್ಮಂದಿರ ಹೆಸರಿಗೆ ಇದೆ. ಸದರಿ

ಅಂಗಡಿಯಲ್ಲಿ ಪಾಲುದಾರಿಕೆ ಮುಖಾಂತರ ವ್ಯಾಪಾರ ಮಾಡುವುದಿಲ್ಲಾ ಒಟ್ಟಾಗಿ ವ್ಯಾಪಾರ ಮಾಡುತ್ತೇವೆ. ನಮ್ಮ ಅಂಗಡಿಯಿಂದ ವಾರ್ಷಿಕ ಆದಾಯ ಏಷ್ಟು ಇದೆ ಅಂತಾ ನನಗೆ ಗೊತ್ತಿಲ್ಲಾ ಆದರೆ ನಮ್ಮ ಸಹೋದರನಿಗೆ ಗೊತ್ತು. ಅಂಗಡಿಯ ಹಣ ಕೊಡುವುದು ತೆಗೆದುಕೊಳ್ಳುವ ಬಗ್ಗೆ ನಮ್ಮ ಸಹೋದರರರಿಗೆ ಗೊತ್ತು. ಸಾಕ್ಷಿ ಮುಂದುವರೆದು ನಾನು ಮಾಡಿದ ವ್ಯವಹಾರ ನನಗೆ ಗೊತ್ತು ಇದೆ. ನಾನು ಮಾಡಿದ ವ್ಯವಹಾರಕ್ಕೆ ಬೇರೆಯಾಗಿ ಆದಾಯ ತೆರಿಗೆ ಪಾವತಿಸುವುದಿಲ್ಲಾ ಆದರೆ ಒಟ್ಟಾರೆಯಾಗಿ ಆದಾಯ ತೆರಿಗೆ ಪಾವತಿಸುತ್ತೇವೆ. ನನ್ನ ವೈಯಕ್ತಿಕ ವಾರ್ಷಿಕ ಆದಾಯ ಏಷ್ಟು ಇದೆ ಅಂತಾ ಲೆಕ್ಕ ಮಾಡಿರುವುದಿಲ್ಲಾ. ಈ ಪ್ರಕರಣದ ವ್ಯವಹಾರ ಮತ್ತು ಇತರ ಪ್ರಕರಣಗಳ ವ್ಯವಹಾರ ನಮ್ಮ ಟ್ರೇಡಿಂಗ ಅಂಗಡಿ ಮುಖಾಂತರ ಮಾಡಿರುತ್ತೇವೆ. ಈ ವ್ಯವಹಾರವನ್ನು ಬಿ ಎಸ ಹಲಗೇರಿ ಟ್ರೇಡರ್ಸ ಮುಖಾಂತರ ಮಾಡಿದ ಬಗ್ಗೆ ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ನಾನು ನನ್ನ ದೂರನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ದೂರಿನಲ್ಲಿ ಬಿ ಎಸ ಹಲಗೇರಿ ಟ್ರೇಡರ್ಸ ಅಂಗಡಿಯ ಪರವಾಗಿ ಮತ್ತು ನಮ್ಮ ಸಹೋದರರ ಪರವಾಗಿ ಬರೆದ ಬಗ್ಗೆ ನಾನು ಓದಿ ತಿಳಿದುಕೊಂಡಿಲ್ಲಾ.

6-7 ವರ್ಷದ ಹಿಂದಿನಿಂದ ಆರೋಪಿತನ ಪರಿಚಯ ಇದೆ. ಆರೋಪಿತನು ಸೈಕಲ್ ಮೋಟಾರ ರಿಪೇರಿ ಅಂಗಡಿ ಇಟ್ಟುಕೊಂಡಿದ್ದಾನೆ ಅಂದರೆ ಸರಿ. ಸುಬಾಸ ಟೋಪಣ್ಣ ನೇಜಕರ ಈತನು ಎಸ ಬಿ ಐ ಲೈಫ ಇನ್ಸೂರೆನ್ಸ ಏಜೆಂಟ ಅಂದರೆ ಸರಿ. ನಜೀರ ಅಹ್ಮದ ಈತನು ಕೂಲಿ ಕೆಲಸ

ಮಾಡುತ್ತಾನೆ ಅಂದರೆ ಸರಿ. ನಮಗೆ ಜಾಗ ಕೊಡುವುದು ತೆಗೆದುಕೊಳ್ಳುವ ಸಲುವಾಗಿ ಆರೋಪಿತನ ಪರಿಚಯ ಆಗಿರುತ್ತದೆ. ಯಾವುದೇ ಒಬ್ಬ ಸಾಮಾನ್ಯ ವ್ಯಕ್ತಿ ಹಣವನ್ನು ಪಡೆದರೆ ಮರಳಿ ಕೊಡುವ ಸಾಮರ್ಥ್ಯ ಇದ್ದರೆ ಮಾತ್ರ ಕೊಡುತ್ತಾರೆ ಎಂದರೆ ಸರಿ. ಯಾವುದೇ ಒಂದು ಹಣಕಾಸಿನ ವ್ಯವಹಾರದಲ್ಲಿ ಸಿಲುಕಿ ಲುಕ್ಸಾನ ಆದವರಿಗೆ ಹಣ ಕೊಡುವುದಿಲ್ಲಾ ಎಂದರೆ ಸರಿ. ನೇಜಕರ ಈತನು ಸುಮಾರು 4 ವರ್ಷದಿಂದ ಪರಿಚಯ. ನಜೀರ ಅಹ್ಮದ ಈತನು ಸುಮಾರು 7-8 ವರ್ಷದಿಂದ ಪರಿಚಯ.

2022 ರಿಂದ 2023 ರವರೆಗೆ ಆರೋಪಿತನಿಗೆ ಹಂತ ಹಂತವಾಗಿ ಹಣ ಕೊಡುತ್ತಾ ಬಂದಿರುತ್ತೇನೆ. ಮೊದಲನೆಯ ಬಾರಿಗೆ ಆರೋಪಿತನಿಗೆ ಏಷ್ಟು ಹಣ, ಯಾವ ದಿನ, ಯಾವ ತಿಂಗಳು ಮತ್ತು ಏಲ್ಲಿ ನನಗೆ ಗೊತ್ತಿಲ್ಲಾ ಆದರೆ ಅಗಷ್ಟ ತಿಂಗಳಲ್ಲಿ 75 ಸಾವಿರ ಹಣ 2022 ರಲ್ಲಿ ಪೋನ್ ಪೇ ಮಾಡಿರುತ್ತೇನೆ. ಸದರಿ ಹಣವನ್ನು ಎಷ್ಟುದಿನದಲ್ಲಿ ಪರತ್ ಕೊಡುತ್ತೇನೆ ಅಂತಾ ಹೇಳಲಿಲ್ಲಾ. ಸದರಿ 75 ಸಾವಿರ ಹಣ ಕೊಟ್ಟ ಬಗೆ ಯಾವುದೇ ದಾಖಲೆಗಳನ್ನು ಮಾಡಿಕೊಂಡಿಲ್ಲಾ. 75 ಸಾವಿರ ಹಣ ಕೊಟ್ಟ ಮೇಲೆ 2 ರಿಂದ 2 ಲಕ್ಷ 50 ಸಾವಿರ ಮತ್ತೇ ಹಣ ಪಡೆದುಕೊಂಡು ಹೋಗಿರುತ್ತಾನೆ. ಸದರಿ ಹಣ ಪಡೆದುಕೊಂಡು ಹೋದ ಬಗ್ಗೆ ತಾರೀಖು ತಿಂಗಳು ನೆನಪಿಲ್ಲಾ. ಸದರಿ ಹಣವನ್ನು ಕೇಳಿದಾಗ ಕೊಡುತ್ತೇವೆ ಅಂತಾ ಹೇಳಿರುತ್ತಾರೆ. ಯಾವಾ ಅಂತಾ ನಾನು ಮರಳಿ ಕೇಳಿರುವುದಿಲ್ಲಾ. ನವಂಬರ 2022 ರಲ್ಲಿ ರೂ. 1,10,000/- ಗಳನ್ನು ಆರೋಪಿತನು ಪಡೆದುಕೊಂಡು ಹೋಗಿರುತ್ತಾನೆ. ನಂತರ ಹಣ ಒಯ್ಯುತ್ತಿರುವೆ ಕೊಡುವುದು

ಯಾವಾಗ ಅಂತಾ ಕೇಳಿದಾಗ ನನ್ನ ಸೈಟ್ ಮಾರುವುದಿದೆ ನಂತರ ಕೊಡುವುದಿದೆ ಅಂತಾ ಹೇಳಿರುತ್ತಾನೆ. ನಾನು ಆರೋಪಿತನ ಜಾಗವನ್ನು ನೋಡಿರುವುದಿಲ್ಲಾ. ಈ ಮೇಲಿನ ಎಲ್ಲ ಹಣ ಕೊಟ್ಟ ಬಗ್ಗೆ ಯಾವುದೇ ದಾಖಲೆ ಮಾಡಿಕೊಂಡಿಲ್ಲಾ ಆದರೆ ನಮ್ಮ ಬುಕ್ ದಲ್ಲಿ ನಮೂದಿಸಿರುತ್ತೇನೆ. ಸದರಿ ಬುಕ್ ದಲ್ಲಿ ಆರೋಪಿತರಿಗೆ ಹಣ ಕೊಟ್ಟ ಬಗ್ಗೆ ಮಾತ್ರ ಬರೆದಿಟ್ಟಿರುತ್ತೇನೆ. ಉಳಿದ ಹಣವನ್ನು ಯಾವಾಗ ಯಾವಾಗ ಕೊಟ್ಟಿರುತ್ತೇನೆ ಅಂತಾ ಹೇಳಲು ಬರುವುದಿಲ್ಲಾ. ಸದರಿ ಬುಕ್ ದಲ್ಲಿ ಆರೋಪಿತರ ಸಹಿ ಪಡೆದಿರುವುದಿಲ್ಲಾ.

ನೇಜಕರ ರವರಿಗೆ ನವಂಬರ, ಡಿಸೆಂಬರ ದಲ್ಲಿ ಚೆಕ್ ಮುಖಾಂತರ ಮತ್ತು ನಗದು ಹಣದಲ್ಲಿ ಕೊಟ್ಟಿರುತ್ತೇನೆ. ಸದರಿ ಹಣವನ್ನು ಯಾವ ತಾರೀಖು, ತಿಂಗಳಲ್ಲಿ ಕೊಟ್ಟಿರುತ್ತೇನೆ ಅಂತಾ ಹೇಳಲು ಬರುವುದಿಲ್ಲಾ. ನೇಜಕರ ಇವರಿಗೆ ಎರಡು ಸಲ ಚಕ ಮುಖಾಂತರ 2 ಲಕ್ಷ ದಂತೆ ಒಟ್ಟು 4 ಲಕ್ಷ ಕೊಟ್ಟಿರುತ್ತೇನೆ. 2 ಲಕ್ಷ ಹಣ ಫೋನ ಪೇ ಮುಖಾಂತರ ಕೊಟ್ಟಿರುತ್ತೇನೆ. ಒಂದು ಚೆಕ್ಕನ್ನು ಮರಳಿ ಕೊಟ್ಟು 2 ಲಕ್ಷ ಹಣ ನಗದು ರೂಪದಲ್ಲಿ ತೆಗೆದುಕೊಂಡು ಹೋಗಿರುತ್ತಾರೆ. ನೇಜಕರ ರವರಿಗೆ ಇನ್ನೂ 2 ಲಕ್ಷ ಮದುವೆಗೆ ಅಂತಾ ನಗದು ರೂಪದಲ್ಲಿ ಪಡೆದುಕೊಂಡಿರುತ್ತಾರೆ.

ನಜೀರಸಾಬ್ ಇವರು 2 ಲಕ್ಷ 30 ಸಾವಿರ, 3 ಲಕ್ಷ, 1 ಲಕ್ಷ 10 ಸಾವಿರದಂತೆ ತೆಗೆದುಕೊಂಡು ಹೋಗಿರುತ್ತಾರೆ. ಯಾವ ತಾರೀಖು, ತಿಂಗಳು ಅಂತಾ ಹೇಳಲು ಆಗುವುದಿಲ್ಲಾ. ಸದರಿ ಆರೋಪಿತನಿಗೆ ನಜೀರಸಾಬ್ ಗೆ ಮತ್ತು ನೇಜಕರವರಿಗೆ ಹಣ ಕೊಡುವಾಗ ಬೇರೆ ಯಾರು ಹಾಜರಿರಲಿಲ್ಲಾ.

ಅನೀಲ ಕುಲಕರ್ಣಿ ಸಾ:ಹಾವೇರಿ ಇವರ 5 ಗುಂಟೆ 6 ಆಣೆ ಜಾಗೆಯನ್ನು ವ್ಯವಹಾರ ಮಾಡಿರುತ್ತೇವೆ ಅಂದರೆ ಸರಿ. ಸದರಿ ಸೈಟ್ ಸುಬಾಸ ನೇಜಕರ ಇವರ ಮುಖಾಂತರ ವ್ಯವಹಾರ ಆಗಿದೆ ಅಂದರೆ ಸರಿ. ಸದರಿ ಜಾಗ 18 ಲಕ್ಷ ರೂಪಾಯಿಗೆ ವ್ಯವಹಾರ ಆಗಿದೆ ಅಂದರೆ ಸರಿ. ಸಾಕ್ಷಿ ಮುಂದುವರೆದು 32 ಲಕ್ಷಕ್ಕೆ ಬಾಂಡ ಆಗಿದೆ ಎಂದು ನುಡಿಯುತ್ತಾರೆ. ದಿನಾಂಕ: 19.10.2022 ರಂದು ನನ್ನ ಖಾತೆಯ ಮುಖಾಂತರ ನೇಜಕರರವರ ಖಾತೆಗೆ 50 ಸಾವಿರ ಹಣ ಹಾಕಿರುತ್ತೇನೆ ಅಂದರೆ ಸರಿ. ಸದರಿ ನೇಜಕರರವರು ಅದೇ ದಿನ ಆರೋಪಿತನ ಖಾತೆಗೆ 50 ಸಾವಿರ ಹಣ ಹಾಕಿದರು ಎಂದರೆ ನನಗೆ ಗೊತ್ತಿಲ್ಲಾ. ದಿನಾಂಕ: 08.11.2022 ರಂದು ನೇಜಕರ ಇವರ ಖಾತೆಗೆ 40 ಸಾವಿರ ಹಣ, 10.11.2022 ರಂದು ನೇಜಕರ ಇವರ ಖಾತೆಗೆ 10 ಸಾವಿರ ಹಣ ನನ್ನ ಖಾತೆಯಿಂದ ವರ್ಗಾವಣೆ ಆಗಿದೆ ಎಂದರೆ ಸರಿ. ಅದೇ ದಿನ ನೇಜಕರ ರವರು ಸದರಿ ಹಣವನ್ನು ಆರೋಪಿತನ ಖಾತೆಗೆ ವರ್ಗಾವಣೆ ಮಾಡಿದ್ದಾನೆ ಅಂದರೆ ನನಗೆ ಗೊತ್ತಿಲ್ಲಾ. 28.12.2022 ರಂದು 30 ಸಾವಿರ ಮತ್ತು ಅದೇ ದಿವಸ 20 ಸಾವಿರ ಹಣವನ್ನು ನೇಜಕರ ರವರ ಖಾತೆಗೆ ಹಣ ವರ್ಗಾವಣೆ ಮಾಡಿದ್ದೇನೆ ಅಂದರೆ ಸರಿ. ಅದೇ ದಿನ ನೇಜಕರ ರವರು ಸದರಿ ಹಣವನ್ನು ಆರೋಪಿತನ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ದಿನಾಂಕ: 21.02.2023 ರಂದು ನೇಜಕರ ರವರ ಖಾತೆಗೆ 50 ಸಾವಿರ ಹಣವನ್ನು ನನ್ನ ಖಾತೆಯಿಂದ ವರ್ಗಾವಣೆ ಮಾಡಿದ್ದೇನೆ ಅಂದರೆ ಸರಿ. ಅದೇ ದಿನ ನೇಜಕರ ರವರು ಸದರಿ ಹಣವನ್ನು ಆರೋಪಿತನ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ಸದರಿ ಹಣವನ್ನು

ಜಾಗದ ಸಂಚಕಾರ ಅಂತಾ ಮೇಲಿನ ಹಣ ನಾನು ವರ್ಗಾವಣೆ ಮಾಡಿದ್ದೇನೆ ಅಂದರೆ ಸರಿ. ಸದರಿ ಜಾಗದ ಸಂಚಕಾರ ಅಂತಾ ಅನೀಲ ಕುಲಕರ್ಣಿ ರವರಿಗೆ ಆರೋಪಿತನು ಮತ್ತು ನೇಜಕರ 2 ಲಕ್ಷ ಹಣ ನೀಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ಸದರಿ ಮೇಲಿನ ಜಾಗ ಇಲ್ಲಿಯವರೆಗೆ ನನ್ನ ಹೆಸರಿಗೆ ಖರೀದಿ ಆಗಿರುವುದಿಲ್ಲಾ. ಅನೀಲ ಕುಲಕರ್ಣಿ ಇವರಿಂದ ಬಾಂಡ ಬರೆದುಕೊಂಡ ಮೇಲೆ ಅವರ ಮೇಲೆ ಖರೀದಿ ಕೊಡಲು ದಾವೆ ಮಾಡಿರುವುದಿಲ್ಲಾ. ನಾನು ದೊಡ್ಡ ಪ್ರಮಾಣದ ಜಾಗದ ವ್ಯವಹಾರ ಆಗಿರುವುದರಿಂದ ನಾನು ವ್ಯವಹಾರ ರದ್ದುಮಾಡಿಕೊಂಡಿದ್ದೇನೆ ಅಂದರೆ ಸರಿಯಲ್ಲಾ.ಆರೋಪಿತರಿಗೆ ಈ ಮೇಲಿನ ವ್ಯವಹಾರದ ಬಗ್ಗೆ ಸ್ವಲ್ಪ ಹಣ ಮತ್ತು ಕೈಗಡ ಸ್ವಲ್ಪ ಹಣ ನೀಡಿರುತ್ತೇನೆ. ಕೈಗಡ ಹಣ ಆರೋಪಿತನಿಗೆ, ನೇಜಕರ ರವರಿಗೆ ಮತ್ತು ನಜೀರಸಾಬ ಇವರಿಗೆ 18 ರಿಂದ 20 ಲಕ್ಷ ಕೊಟ್ಟಿರುತ್ತೇನೆ. ಸದರಿ ಮೇಲಿನ ಜಾಗದ ಸಂಬಂಧಿಸಿದಂತೆ ಆರೋಪಿತನಿಗೆ, ನೇಜಕರ ರವರಿಗೆ ಮತ್ತು ನಜೀರಸಾಬ ಇವರಿಗೆ 10 ಲಕ್ಷ ಕೊಟ್ಟಿರುತ್ತೇನೆ. ಆರೋಪಿತರಿಗೆ ಜಾಗೆಗೆ ಸಂಬಂಧಿಸಿದಂತೆ 10 ಲಕ್ಷ ಕೊಟ್ಟ ಬಗ್ಗೆ 500 ರೂಪಾಯಿ ಬಾಂಡ ಬರೆದುಕೊಟ್ಟಿರುತ್ತಾರೆ. ಆರೋಪಿತರ ಜೊತೆಗೆ ಬಾಂಡ ಬಗ್ಗೆ ಮತ್ತು ಚೆಕ್ಕುಗಳ ಬಗ್ಗೆ ಹಲವಾರು ಬಾರಿ ಫೋನ ಮುಖಾಂತರ ಮಾತನಾಡಿದ್ದೇನೆ ಅಂದರೆ ಸರಿ. ನಾನು ಮಾತನಾಡಿದ ಬಗ್ಗೆ ಸಿಡಿ ಮಾಡಿ ನ್ಯಾಯಾಲಯಕ್ಕೆ ಆರೋಪಿತರು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲಾ. ನಾನು ಫೋನಿನಲ್ಲಿ ಆರೋಪಿತರಿಗೆ ಬಾಂಡ ಖಾಲಿ ಇದ್ದು ಅದರ ಮೇಲೆ ಬರೆದುಕೊಂಡು ನಿಮ್ಮ ಮನೆ ಕಬ್ಜಾ ಬಿಡಿಸಿ ಕಬ್ಜಾ ಪಡೆದುಕೊಳ್ಳುತ್ತೇನೆ ಅಂತಾ ಫೋನಿನಲ್ಲಿ ಮಾತನಾಡಿದ್ದೇನೆ ಅಂದರೆ

ಸರಿ. ಸದರಿ ಬಾಂಡ ಪಡೆದ ನಂತರ ಸುಮಾರು 15 ರಿಂದ 20 ದಿನ ಆರೋಪಿತರ ಮನೆಗೆ ಅಡ್ಡಾಡಿದ ಮೇಲೆ ಚೆಕ್ಕು ಬರೆದು ಸಹಿ ಮಾಡಿಕೊಟ್ಟಿರುತ್ತಾರೆ. ಬಾಂಡನ್ನು 2022 ರಲ್ಲಿ ಬಾಂಡನ್ನು ತೆಗೆದುಕೊಂಡಿದ್ದೇನೆ. ಆರೋಪಿತರ ಚೆಕ್ಕನ್ನು 24.06.2024 ರಂದು ಪಡೆದುಕೊಂಡಿರುತ್ತೇನೆ. ಆರೋಪಿತರಿಗೆ ಫೋನಿನಲ್ಲಿ ನಿಮ್ಮ ಖಾಲಿ ಚೆಕ್ಕು ನನ್ನ ಹತ್ತಿರ ಇದೆ ಅದನ್ನು ನ್ಯಾಯಾಲಯಕ್ಕೆ ಹಾಕಿ ಹಣ ವಸೂಲಿ ಮಾಡಿಕೊಳ್ಳುತ್ತೇನೆ ಅಂತಾ ಮಾತನಾಡಿರುತ್ತೇನೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿತನು ಮನೆಗೆ ಹೋದಾಗ ಒಂದು ಚೆಕ್ಕನ್ನು ಬರೆದುಕೊಟ್ಟರು ಮತ್ತು ಇನ್ನೊಂದನ್ನು ಖಾಲಿ ಕೊಟ್ಟಿರುತ್ತಾರೆ. ನಂತರ ಒಂದು ಚೆಕ್ಕನ್ನು ಬ್ಯಾಂಕಿಗೆ ಹಾಕಿ ನಂತರ 4 ಜನರನ್ನು ಸೇರಿಸಿ ಸುಮ್ಮನೆ ಬಿಟ್ಟಿರುತ್ತೇನೆ. ನಂತರ 24.06.2024 ರಂದು ಆರೋಪಿತನು ಇನ್ನೊಂದು ಚೆಕ್ಕನ್ನು ನೀಡಿರುತ್ತಾನೆ. ಇದೇ ರೀತಿ ನೇಜಕರ ಮತ್ತು ನಜೀರಸಾಬ ಇವರ ಬೇರೆ ಚೆಕ್ಕುಗಳು ನನ್ನ ಹತ್ತಿರ ಇರುವುದಿಲ್ಲಾ. ಆರೋಪಿತನು ನಿಪಿ-01 ನ್ನು ಬರೆದುಕೊಟ್ಟಿರುತ್ತಾನೆ. ನಿಪಿ-01 ರ ಮೇಲೆ ಹೆಸರು ಬರೆದು ದಿನಾಂಕ ಹಾಕಿ ಸಹಿ ಮಾಡಿ ಆರೋಪಿತನು ಕೊಟ್ಟಿರುತ್ತಾನೆ. ನಿಪಿ-01 ರ ಮೇಲೆ ಹಣವನ್ನು ಆರೋಪಿತನು ಬರೆದುಕೊಟ್ಟಿರುತ್ತಾನೆ. ನಿಪಿ-01 ನ್ನು ಬೆರಳು ತಜ್ಞರಿಗೆ ಕಳುಹಿಸಲು ನನ್ನದು ಯಾವುದೇ ತೊಂದರೆ ಇರುವುದಿಲ್ಲಾ.

ಫಕ್ರುಸಾಬ್ ಇವರ ಮಿಲ್ಲಿನಲ್ಲಿ ಆರೋಪಿತನ 1 ನೇ ಚೆಕ್ಕನ್ನು ಪಡೆದಿರುತ್ತೇನೆ ಆದರೆ ಅದನ್ನು ಖಾತೆಗೆ ಹಾಕಿ ಮುಂದೆವರೆಸಿರುವುದಿಲ್ಲಾ. ಸದರಿ ಚೆಕ್ಕನ್ನು ಕೊಡುವಾಗ ನಾವು ವಿಡಿಯೋ ಮಾಡಿರುತ್ತೇವೆ ಅಂದರೆ ಸಾಕ್ಷಿ ನಮ್ಮ ಹುಡುಗರು ಮಾಡಿರಬಹುದು ಎಂದು ನುಡಿಯುತ್ತಾರೆ.

ನಾವು ಫಕ್ರುಸಾಬ್ ಇವರ ಮಿಲ್ಲಿನಲ್ಲಿ ನಮ್ಮ ಹಿಂಬಾಲಕರು ಮತ್ತು ಗುಂಡಾಗಳನ್ನು ಸೇರಿಸಿ ಆರೋಪಿತನ ಚೆಕ್ಕನ್ನು ಪಡೆದಿದ್ದೇನೆ ಅಂದರೆ ಸರಿಯಲ್ಲಾ. ಸದರಿ ವ್ಯವಹಾದ ವಿಡಿಯೋ ಚಿತ್ರಿಕರಣ ಮಾಡಿದ್ದಾರೆ ಅಂದರೆ ಸರಿಯಲ್ಲಾ.

ನನ್ನ ದೂರಿನಲ್ಲಿ ನನ್ನ ಉದ್ಯೋಗ ಶೇತ್ಕರಿ ಅಂತಾ ಇದೆ ವ್ಯಾಪಾರ ಅಂತಾ ಇಲ್ಲಾ ಎಂದರೆ ಸರಿ. ಆರೋಪಿತನು ಬೇರೊಂದು ಹಣಕಾಸಿನ ವ್ಯವಹಾರದಲ್ಲಿ ಸಿಲುಕಿಕೊಂಡಿದ್ದೇನೆ ಅಂತಾ ಬರೆಸಿದ್ದು ಆದರೆ ಯಾವ ಹಣಕಾಸಿನ ವ್ಯವಹಾರ ಅಂತಾ ನನ್ನ ಮುಂದೆ ಹೇಳಿರುವುದಿಲ್ಲಾ. ನಮ್ಮ ಮನೆಯಲ್ಲಿ 5 ರಿಂದ 10 ಲಕ್ಷ ಹಣವನ್ನು ಕೂಡಿ ಇಟ್ಟಿದ್ದೆ. ನಾನು ಸಂಬಂಧಿಕರ ಹತ್ತಿರ 5 ಲಕ್ಷ, 2 ಲಕ್ಷ, 10 ಲಕ್ಷ ಹಣವನ್ನು ಪಡೆದುಕೊಂಡಿರುತ್ತೇನೆ. ಸಂಬಂಧಿಕರು ಎಂದರೆ ಬಾಬಾಜಾನ ಶೇಖಸನದಿ ಇವರ ಹತ್ತಿರ ಹಣ ಪಡೆದಿದ್ದೇನೆ ಆದರೆ ಎಷ್ಟು ಹಣ ಅಂತಾ ಹೇಳಲು ಬರುವುದಿಲ್ಲಾ. ನಮ್ಮ ತಮ್ಮ ಮೋಹಮ್ಮದ ಅಲಿ ಜಿನ್ನಾ, ಮಾಬುಬಲಿ, ಇವರ ಹತ್ತಿರ ಹಣ ಪಡೆದಿದ್ದೇನೆ ಮತ್ತು ಇನ್ನೂ ಅನೇಕ ಜನ ಇದ್ದಾರೆ ಅವರ ಹೆಸರು ಹೇಳಲು ಬರುವುದಿಲ್ಲಾ. ನನ್ನ ಜಮೀನು ಭೂಸ್ವಾದೀನದಿಂದ 2022 ಜನವರಿಯಲ್ಲಿ 7 ಲಕ್ಷ, ನಂತರ 3,39,000/- ಮತ್ತು 6 ಲಕ್ಷ ಹಣ ಬಂದಿರುತ್ತದೆ. ಸಂಬಂಧಿಕರ ಕಡೆಯಿಂದ ಕೈಗಡವಾಗಿ ಹಣವನ್ನು ಪಡೆದುಕೊಂಡಿರುತ್ತೇನೆ. ಅದಕ್ಕೆ ಯಾವುದೇ ದಾಖಲೆಯನ್ನು ಪಡೆದಿರುವುದಿಲ್ಲಾ. ಆರೋಪಿತನಿಗೆ ನಗದಾಗಿ 9 ಲಕ್ಷ ಹಣ ನೀಡಿದ್ದೇನೆ ಅಂತಾ ಬರೆಯಲಾಗಿದೆ ಎಂದರೆ ಸಾಕ್ಷಿಯು ಫೋನ್ ಪೇ ಮೂಲಕ ಮತ್ತು ನಗದಾಗಿ ಅಂತಾ ಬರೆದಿದ್ದೇನೆ ಎಂದು ನುಡಿಯುತ್ತಾರೆ.

ನಾನು ಹಲವಾರು ಜನರ ಹತ್ತಿರ ಹಣ ಪಡೆದುಕೊಂಡು ಬಿಟ್ ಕ್ವಾಯಿನ್ ಮತ್ತು ಕ್ರಿಪ್ಟೊ ಕರೆನ್ಸಿ ಏಜೆಂನ್ಸಿ ಮಾಡಿದ್ದೇನೆ ಅಂದರೆ ಸರಿಯಲ್ಲಾ. ದಿಃ 19.04.2024 ರಂದು ಸದರಿ ಬಿಟ್ ಕ್ವಾಯಿನ್ ಮತ್ತು ಕ್ರಿಪ್ಟೊ ಕರೆನ್ಸಿ ಏಜೆಂನ್ಸಿ ಸಲುವಾಗಿ ಹಾವೇರಿ ಸಿ ಆರ ನಂಬರ 27/2025 ಅಂತಾ ಶಹರ ಠಾಣೆಯಲ್ಲಿ ದಾಖಲಾಗಿದೆ ಎಂದರೆ ಸರಿ ಆದರೆ ಸುಳ್ಳು ದಾಖಲಾಗಿದೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ರೂ.13,13,300/- ನಾನು ಮೋಸ ಮಾಡಿದ್ದೇನೆ ಅಂತಾ ನಮೂದಾಗಿದೆ ಅಂದರೆ ಸರಿಯಲ್ಲಾ. ಸದರಿ ಮೇಲಿನ ವ್ಯವಹಾರಕ್ಕೆ ಸಂಬಂಧಿದಂತೆ ಬಾಗಲಕೋಟ, ಬಿಜಾಪೂರ, ಹುಬ್ಬಳ್ಳಿಯಲ್ಲಿ ಹಲವಾರು ಪ್ರಕರಣಗಳು ದಾಖಲಾಗಿವೆ ಎಂದರೆ ಸರಿಯಲ್ಲಾ. ಈ ಮೇಲಿನ ಎಲ್ಲಾ ಪ್ರಕರಣಗಳಲ್ಲಿ ನಾನು ನಿರೀಕ್ಷಣಾ ಜಾಮೀನು ಪಡೆದಿರುತ್ತೇನೆ ಆದರೆ ಅವು ಸುಳ್ಳು ಪ್ರಕರಣಗಳು ಇರುತ್ತವೆ. ನಾನು ಸಾರ್ವಜನಿಕರಿಂದ ಹಣ ಪಡೆದು ಮೋಸದಿಂದ ಗಳಿಸುವ ಉದ್ಯೋಗ ಇದೆ ಎಂದರೆ ಸರಿಯಲ್ಲಾ.

ಸಾರ್ವಜನಿಕರಿಂದ ಪಡೆದ ಹಣವನ್ನು ದ್ವಿಗುಣ ಗಳಿಸಲು ಹೋಗಿ ಸಾಕಷ್ಟು ಲುಕ್ಸಾನ ಆಗಿದ್ದೇನೆ ಅಂದರೆ ಸರಿಯಲ್ಲಾ. ನನಗೂ ಮತ್ತು ಆರೋಪಿತನಿಗೂ ಯಾವುದೇ ಹಣ ಕೊಡುವುದು ಮತ್ತು ತೆಗೆದುಕೊಳ್ಳುವುದು ಯಾವುದೇ ವ್ಯವಹಾರ ಆಗಿಲ್ಲಾ ಅಂದರೆ ಸರಿಯಲ್ಲಾ. ನನಗೆ ಹಣ ಕೊಡುವ ಸಾಮರ್ಥ್ಯ ಇಲ್ಲಾ ಎಂದರೆ ಸರಿಯಲ್ಲಾ. ಆರೋಪಿನಿಗೆ 9 ಲಕ್ಷ ಸಾಲ ಪಡೆದುಕೊಳ್ಳುವುದು ಮತ್ತು ಕೊಡುವ ಸಾಮರ್ಥ್ಯ ಇಲ್ಲಾ ಎಂದರೆ ಸರಿಯಲ್ಲಾ. ಅನೀಲನ ಜೊತೆ ವ್ಯವಹಾರ ಆದ ಬಗ್ಗೆ ಇವತ್ತಿನವರೆಗೂ ನೋಂದಾಯಿತ ಖರೀದಿ ಪತ್ರ

ಆಗಿಲ್ಲಾ ಎಂದರೆ ಸಾಕ್ಷಿಯು ಅನೀಲ ಯಾರು ನನಗೆ ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ಅನೀಲ ಕುಲಕರ್ಣಿ ಅವರ ಜೊತೆಗೆ ವ್ಯವಹಾರ ಆಗಿದ್ದರೂ ಸಹಿತ ಈ ದಿನ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಅನೀಲ ಕುಲಕರ್ಣಿ ವ್ಯವಹಾರದ ಬಾಬತ್ತು ನೇಜಕರ ಖಾತೆಗೆ ಹಾಕಿದ್ದೆ ಎಂದರೆ ಸರಿಯಲ್ಲಾ. ನೇಜಕರ ಖಾತೆಗೆ 2 ರಿಂದ 3 ಲಕ್ಷ ಹಣ ಹಾಕಿದ್ದೇನೆ ಅಂದರೆ ಸರಿ. ಈ ಮೂರು ಪ್ರಕರಣದ ಆರೋತರು ಸೇರಿ ಅನೀಲ ಕುಲಕರ್ಣಿ ಇವರಿಗೆ ಹಣ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ನನಗೂ ಮತ್ತು ಅನೀಲ ಕುಲಕರ್ಣಿ ಅವರ ಮಧ್ಯ ಖರೀದಿ ವ್ಯವಹಾರ ಆಗಿದ್ದರೆ ಈ ಪ್ರಕರಣ ದಾಖಲಿಸುವ ಪ್ರಶ್ನೆ ಬರುತ್ತಿರಲಿಲ್ಲಾ ಎಂದರೆ ಸರಿಯಲ್ಲಾ. ಈ ಆರೋಪಿಯ ಬ್ಯಾಂಕ ಖಾತೆ ಬ್ಯಾಂಕ ಆಫ್ ಬರೋಡಾದಲ್ಲಿ ಇರುತ್ತದೆ. ನಾನು ಆರೋಪಿತನನ್ನು ಬ್ಯಾಂಕಿಗೆ ಕರೆದುಕೊಂಡು ಹೋಗಿ ಖಾತೆ ಮಾಡಿಸಿ ಚೆಕ ಬುಕ್ ಪಡೆದಿರುತ್ತೇನೆ ಅಂದರೆ ಸರಿಯಲ್ಲಾ. ನಾನು ಫಕ್ರುಸಾಬ್ ಇವರ ಗ್ಯಾರೇಜನಲ್ಲಿ ಈ ಪ್ರಕರಣದ ಆರೋಪಿಗೆ ಹೆದರಿಸಿ, ಬೆದರಿಸಿ ನಿಪಿ-01 ಕ್ಕೆ ಸಹಿ ಪಡೆದಿದ್ದೇನೆ ಅಂದರೆ ಸರಿಯಲ್ಲಾ. ನನಗೂ ಮತ್ತು ಆರೋಪಿತನಿಗೂ ಯಾವುದೇ ವ್ಯವಹಾರ ಆಗದೇ ಇದ್ದರೂ ಆರೋಪಿತನು ಚೆಕ ಕೊಟ್ಟಿದ್ದಾನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಸುಬಾಸ ನೇಜಕರ ಇತನಿಗೆ ಸಂಬಂಧಿಸಿದಂತೆ ಕೆಎ-27/ಇಆರ್-0045 ಅಂತಾ ವಾಹನ ಇತ್ತು ಎಂದರೆ ಗೊತ್ತಿಲ್ಲಾ. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಕೇಳಲಾಗಿ ಅದರಲ್ಲಿ ಇರುವ ಸಹಿಯನ್ನು ನೋಡಿ ಒಪ್ಪಿಕೊಂಡಿದ್ದು ಸದರಿ ಮುಚ್ಚಳಿಕೆ ಪತ್ರವನ್ನು ನಿಡಿ-01 ಎಂದು ಗುರುತಿಸಲಾಯಿತು.

ಸಾಕ್ಷಿಯ ಸಹಿಯನ್ನು ನಿಡಿ-01(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ನಿಡಿ-01 ಪೊಲೀಸಠಾಣೆಯಲ್ಲಿ ಆಗಿದೆ ಎಂದು ನುಡಿಯುತ್ತಾರೆ. ನೇಜಕರ ಇವರ ಬೈಕನ್ನು ನಾನು ಹಿಡಿದಿಟ್ಟುಕೊಂಡಿದ್ದರಿಂದ ಪೊಲೀಸಠಾಣೆಯಲ್ಲಿ ನಿಡಿ-01 ನ್ನು ಬರೆಸಿರುತ್ತಾರೆ. ನೇಜಕರ ಇವರು ಮುಂಚೆ ನನಗೆ ಚೆಕ್ಕು ನೀಡಿದ್ದು ಅದನ್ನು ನಗದೀಕರಣಕ್ಕೆ ಹಾಕಿಕೊಳ್ಳಿ ಅಂತಾ ಹೇಳಿ ಆತನ ವಾಹನವನ್ನು ಕೊಡಲು ಹೇಳಿ ನಿಡಿ-01 ನ್ನು ಬರೆಸಿರುತ್ತಾರೆ. ನೇಜಕರ ರವರ ವಾಹನ ಅವರ ಹತ್ತಿರವೇ ಇರುತ್ತದೆ. ಆರೋಪಿತನ ಕಡೆಯಿಂದ ಯಾವುದೇ ಚೆಕ್ಕು ಪಡೆಯದೆ ಇದ್ದರು ಸಹ ಆರೋಪಿ ಹಣ ಕೊಡಬೇಕು ಅಂತಾ ಚೆಕ್ಕು ಕೊಟ್ಟಿದ್ದಾನೆ ಅಂತಾ ಸುಳ್ಳು ಹೇಳುತ್ತಿದ್ದಾನೆ ಅಂದರೆ ಸರಿಯಲ್ಲಾ. ಕೆಎ-27/ಇಜಿ-8827 ಸೈಕಲ್ ಮೋಟಾರ ಇದು ನಜೀರಸಾಬನ ವಾಹನ ನನ್ನ ಹತ್ತಿರ ಇದೆ ಎಂದರೆ ಸರಿಯಲ್ಲಾ.

ನಜಕರನ ವಾಹನ ನನ್ನ ಹತ್ತಿರ ಇರಲಿಲ್ಲಾ ಆದರೆ ಹಿಡಿದಿದ್ದೆ ಎಂದು ನುಡಿಯುತ್ತಾರೆ. ಸದರಿ ವಾಹನದಲ್ಲಿ ಖಾಲಿ ಬಾಂಡಗಳು ಮತ್ತು ಎರಡು ಸಹಿ ಮಾಡಿದ ಖಾಲಿ ಚೆಕ್ಕುಗಳು ಅದರಲ್ಲಿ ಇದ್ದವು ಅಂದರೆ ಸರಿಯಲ್ಲಾ. ಸದರಿ ಎರಡು ಖಾಲಿ ಚೆಕ್ಕುಗಳಲ್ಲಿ ಇರುವ ಒಂದು ಚೆಕ್ಕನ್ನು ಹಣವನ್ನು ಬರೆದು ದುರುಪಯೋಗ ಪಡಿಸಿಕೊಂಡಿದ್ದೇನೆ ಅಂದರೆ ಸರಿಯಲ್ಲಾ. ನಜಕರ ಇವರು ನನ್ನ ಕಡೆಯಿಂದ ವೈಯಕ್ತಿಕವಾಗಿ ಹಣ ತೆಗೆದುಕೊಳ್ಳುವುದು ಮತ್ತು ಕೊಡುವುದು ಮಾಡಿಲ್ಲಾ ಅಂದರೆ ಸರಿಯಲ್ಲಾ. ನಜಕರ ಅವರ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಜಕರ

ಇವನಿಗೆ ರೂ. 9 ಲಕ್ಷ ಹಣ ಪಡೆದುಕೊಳ್ಳುವ ಮತ್ತು ಮರಳಿಕೊಡುವ ಶಕ್ತಿ ಇಲ್ಲಾ ಅಂದರೆ ಸರಿಯಲ್ಲಾ. ಮೂರು ಆರೋಪಿತರು ನನ್ನ ಕಡೆಯಿಂದ ಯಾವುದೇ ಹಣ ಪಡೆಯದೆ ಇದ್ದರೂ ಸಹ ಸುಳ್ಳು ಪ್ರಕರಣಗಳನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಾನು ಬೇರೆಯವ ಹಣ ಎತ್ತಿ ಹಾಕುವ ಉದ್ಯೋಗ ಮಾಡುತ್ತೇನೆ ಅಂದರೆ ಸರಿಯಲ್ಲಾ. ನನ್ನ ಮೇಲೆ ಸುಮಾರು 16 ರಿಂದ 17 ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ ಎಂದರೆ ಸರಿಯಲ್ಲಾ. ಆರೋಪಿತನ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

ಮರುವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೆ ಕೆ ಸರಿ ಅದೆ.

Sd/-

ಜೆಎಂಎಫ್‌ಸಿ, ಬ್ಯಾಡಗಿ.